INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -1, May-June, 2022,
PageNo,57-66
Peer Reviewed Journal, Referred Journal

# ಶಿವಮೊಗ್ಗ ಜಿಲ್ಲೆಯ ಚಾರಿತ್ರಿಕ ತಾಣಗಳು ಮತ್ತು ದೇವಾಲಯಗಳ ಒಂದು ಸಂಕ್ಷಿಪ್ತ ಪರಿಚಯ

**ಶಿವಶಂಕರಮೂರ್ತಿ.ಎಸ್.ಎಂ**[1]

ದಕ್ಷಿಣ ಭಾರತ ಚರಿತ್ರೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಜಿಲ್ಲೆಗಳಲ್ಲಿ ಒಂದಾಗಿರುವಂತಹ ಶಿವಮೊಗ್ಗ ಜಿಲ್ಲೆ ಪ್ರಮುಖ ಸ್ಥಾನ ಪಡೆದುಕೊಂಡಿದೆ. ಕರ್ನಾಟಕ ನೈಸರ್ಗಿಕ ಸಂಪನ್ಮೂಲಗಳಂದ ಹಾಗೂ ಸಾಂಸ್ಕೃತಿಕ ಇತಿಹಾಸಗಳಂದ ಭಾರತ ಚರಿತ್ರೆಯಲ್ಲಿ ಅಗ್ರಸ್ಥಾನ ಪಡೆದಿದೆ. ಇತಿಹಾಸದುದ್ದಕ್ಕೂ ಒಂದಲ್ಲಾ ಒಂದು ರೀತಿಯ ಸಾಂಸ್ಕೃತಿಕ, ರಾಜಕೀಯ, ಐತಿಹಾಸಿಕ, ಧಾರ್ಮಿಕ ಚಟುವಟಿಕೆಗಳನ್ನು ಕಾಣಬಹುದು. ಅದರಲ್ಲಿಯೂ ಪ್ರಧಾನವಾಗಿ ಚಾರಿತ್ರಿಕ ತಾಣಗಳಿಗೆ ಮತ್ತು ದೇವಾಲಯಗಳಿಗೂ ವಿಶೇಷವಾದಂತಹ ಕೊಡುಗೆಗಳನ್ನು ಸಲ್ಲಿಸುವ ಹಲವು ಹತ್ತು ಪ್ರದೇಶಗಳಲ್ಲಿ ಶಿವಮೊಗ್ಗ ಜಿಲ್ಲೆಯ ಕೂಡ ಒಂದು. ಆದ್ದರಿಂದಲೇ ಇದು ಐತಿಹಾಸಿಕತೆಗೆ ಮತ್ತು ಪ್ರವಾಸಿ ತಾಣಕ್ಕೆ ಹೆಸರುವಾಸಿಯಾಗಿದೆ. ಈ ಪ್ರದೇಶದಲ್ಲಿನ ಪ್ರಮುಖ ಅರಸು ಮನೆತನಗಳಾದ ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು. ಹೊಯ್ಸಳರು, ವಿಜಯನಗರ ಅರಸರು, ಕೆಳದಿನಾಯಕರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣಗೊಂಡ ಹಲವಾರು ಸ್ಮಾರಕಗಳು ಜಿಲ್ಲೆಯನ್ನು ವಾಸ್ತುಶಿಲ್ಪದ ನೆಲೆವೀಡಾಗಿಸಿವೆ. ಬಳ್ಳಿಗಾವೆಯ ಕೇದಾರೇಶ್ವರ, ಭದ್ರಾವತಿಯ ಲಕ್ಷ್ಮೀನರಸಿಂಹ, ಇಕ್ಕೇರಿಯ ಅಘೋರೇಶ್ವರ, ಕೆಳದಿಯ ರಾಮೇಶ್ವರ ಮತ್ತು ವೀರಭದ್ರ, ಕುಬುಟೂರಿನ ಕೈಟಭೇಶ್ವರ. ಹೀಗೆ, ಹಲವು ಹತ್ತು ದೇವಾಲಯಗಳಲ್ಲಿ ಚಿತ್ರಿತವಾದ ಶಿಲ್ಪಕಲೆಗೆ, ಲಯಗಾರಿಕೆಗೆ, ಕಲಾವಂತಿಕೆಗೆ ಅವಿಸ್ಮರಣೀಯ ಸಂಕೇತಗಳಾಗಿವೆ. ಇಂತಹ ಭವ್ಯ ಪರಂಪರೆಯನ್ನು ಹೊಂದಿರುವ ಈ ಜಿಲ್ಲೆಯ ಐತಿಹಾಸಿಕ ಸ್ಥಳಗಳು ಮತ್ತು ದೇವಾಲಯಗಳ ಪರಿಚಯವು ಜನರಿಗಾಗಬೇಕಾದದ್ದು ಅವಶ್ಯಕ. ಶಿವಮೊಗ್ಗ ಜಿಲ್ಲೆಯ ಐತಿಹಾಸಿಕತೆಯನ್ನು ತಿಳಯಲು ಶಾಸನಗಳು ಬಹುಮುಖ್ಯ ಆಧಾರವಾಗಿ ದೊರಕಿವೆ. ಈ ಜಿಲ್ಲೆಯಲ್ಲಿರುವ ಪ್ರಮುಖ ದೇವಾಲಯಗಳಾದ ಕೆಳದಿ ರಾಮೇಶ್ವರ ದೇವಾಲಯ, ಭದ್ರಾವತಿ ಲಕ್ಷ್ಮೀನರಸಿಂಹ ದೇವಾಲಯ, ಹೊಸಗುಂದ ವೀರಭದ್ರ ದೇವಾಲಯ, ಇಕ್ಕೇರಿ ಅಘೋರೇಶ್ವರ ದೇವಾಲಯಗಳಿವೆ.

## ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ

ಲಕ್ಷ್ಮೀನರಸಿಂಹಸ್ವಾಮಿಯ ದೇವಾಲಯಕ್ಕೆ ಪೌರಾಣಿಕ ಹಿನ್ನೆಲೆ ಇರುವಂತೆ ಐತಿಹಾಸಿಕ ಹಿನ್ನೆಲೆಯೂ ಇದೆ. ಈಗ ದೊರೆತಿರುವ ಪುರಾವೆಗಳ ಪ್ರಕಾರ ಈ ದೇವಾಲಯವು ಹೊಯ್ಸಳರ

[1]. **ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ,ಸ.ಪ್ರ.ದ.ಕಾಲೇಜು, ಬಾಣಾವಾರ, ಅರಸೀಕೆರೆ,ಹಾಸನ.**

ಕಾಲದಲ್ಲಿ ನಿರ್ಮಾಣವಾಗಿದೆ. ಹೊಯ್ಸಳರ ಪ್ರಸಿದ್ಧ ದೊರೆಯಾದ ವಿಷ್ಣುವರ್ಧನನ ಮೊಮ್ಮಗನಾದ ಮೂರನೇ ವೀರಸಿಂಹನು ಕಟ್ಟಿಸಿದ್ದನೆಂಬುದು ತಿಳಿದುಬಂದಿದೆ. ಇವನ ಆಡಳಿತಾವಧಿಯಲ್ಲಿ ಭದ್ರಾವತಿಯೂ ಹೊಯ್ಸಳರ ಅಳ್ವಿಕೆಗೊಳಪಟ್ಟಿರುವುದು ತಿಳಿದು ಬಂದಿರುತ್ತದೆ. ಮೂರನೇ ವೀರಸಿಂಹನು ಲಕ್ಷ್ಮೀನರಸಿಂಹಸ್ವಾಮಿಯ ಕೃಪೆಯಿಂದ ರಾಜ್ಯಾಡಳಿತವನ್ನು ಸುಸೂತ್ರವಾಗಿ ನಡೆಸಿರುತ್ತಾರೆ.

**ಶಿವಪ್ಪನಾಯಕನ ಅರಮನೆ**

ಶಿವಮೊಗ್ಗದ ಅರಮನೆಯನ್ನು ಕೆಳದಿ ಶಿವಪ್ಪನಾಯಕನ ಅರಮನೆ ಎಂತಲೂ ಕರೆಯುತ್ತಾರೆ. ಕೆಳದಿ ಅರಸರು ಮುಂಚಾಲು ಅಲ್ಲಿ ಕುಳಿತು ಅಂಗಳದಲ್ಲಿ ನಡೆಯುತ್ತಿದ್ದ ಸಮಾರಂಭಗಳನ್ನು ಮತ್ತು ಉತ್ಸವಗಳನ್ನು ವೀಕ್ಷಿಸುತ್ತಿದ್ದರು. ಈ ಅರಮನೆಯಲ್ಲಿ ಮಾಗಸಾಲೆಯಿದ್ದು ಸಭೆ ಸಮಾರಂಭಗಳು ನಡೆಯುತ್ತಿದ್ದವು. ಮುಂಚಾಚುನಲ್ಲಿ ಕುಳಿತ ಅರಸರು ಕೆಳಗಿನ ಪ್ರಾಂಗಣದಲ್ಲಿ ನಿಂತಿದ್ದ ಸೈನಿಕರನ್ನು ರಕ್ಷಣೆ ಮಾಡಲು ಅನುಕೂಲ ಮಾಡಿಕೊಟ್ಟಿದ್ದರು. ರಾಜರು ನಿಂತುಕೊಳ್ಳುವ ಜಾಗದಲ್ಲಿ ಆಮೆಯಾಕಾರದ ಕಲ್ಲು ಮೆಟ್ಟಿಲನ್ನು ಆಳವಡಿಸಿಕೊಳ್ಳಲಾಗಿತ್ತು. ಬೆಂಗಳೂರಿನಲ್ಲಿರುವ ಟಿಪ್ಪುಸುಲ್ತಾನ್ ಕಾಲದ ಅರಮನೆಯು ಇದೇ ವಿನ್ಯಾಸ ಹೊಂದಿರುವುದು ಕಂಡುಬರುತ್ತವೆ. ಕೆಳದಿ ರಾಜವಂಶದಲ್ಲಿ ಅತ್ಯಂತ ದಕ್ಷ ಚಾಣಕ್ಯ ದೊರೆ ಎಂದು ಪ್ರಖ್ಯಾತನಾದವರು ಶಿವಪ್ಪನಾಯಕನು. ನಾಡಿನಾದ್ಯಂತ ಶಿವಪ್ಪನಾಯಕ ಶಿಸ್ತು ಮನೆ ಮಾತಾಗಿದೆ. ಶಿವಪ್ಪನಾಯಕನು ಉದಾರಿಯೂ ಮತ್ತು ನ್ಯಾಯ ವಿಮರ್ಶಕನೂ ಆಗಿದ್ದರು. ಅನೇಕ ದಾನಧರ್ಮಗಳು ಮತ್ತು ಉಂಬಳಿಗಳು ಇವನಿಂದ ಹಂಚಲ್ಪಟ್ಟಿದೆ ಇವರ ಕಾಲದಲ್ಲಿ ಜಾರಿಗೆ ಬಂದ ಕಂದಾಯದ ಶಿಸ್ತು ಕರ್ನಾಟಕವೇ ಮಾತ್ರವೇ ಅಲ್ಲದೆ ಭಾರತದಲ್ಲಿಯೇ ಒಂದು ಪ್ರಸಿದ್ಧಿಯಾಗಿದೆ.

**ವಸ್ತು ಸಂಗ್ರಹಾಲಯ**

ಶಿವಮೊಗ್ಗದ ಪ್ರಾಚೀನ ವಸ್ತು ಸಂಗ್ರಹಾಲಯವು ಶಿವಪ್ಪನಾಯಕನ ನಿರ್ಮಾಣವಾಯಿತು. ಕೆಳದಿ ಇಕ್ಕೇರಿಗಳ ಸಂಬಂಧಿಸಿದ ಪುರಾವೆಗಳನ್ನು ಈ ಸಂಗ್ರಹಾಲಯದಲ್ಲಿ ಕಾಣಬಹುದು. 1963ರಲ್ಲಿ ಅಂದಿನ ಶಿವಮೊಗ್ಗ ಜಿಲ್ಲಾಧಿಕಾರಿಯಾಗಿದ್ದ ಹೆಚ್.ಎಲ್.ನಾಗೇಗೌಡರವರ ಕಾಳಜಿಯಿಂದ ಈ ಕೇಂದ್ರ ಗ್ರಂಥಾಲಯದ ಕಟ್ಟಡದ ಆವರಣದಲ್ಲಿ ಸಂಗ್ರಹಿಸಿಡಲಾಗಿದ್ದ ವಸ್ತು ಸಂಗ್ರಹಾಲಯವನ್ನು ಪುರಾತತ್ವ ಇಲಾಖೆಯ ಅಡಿಯಲ್ಲಿ ಸೇರಿಸಿ ಶಿವಪ್ಪನಾಯಕ ಅರಮನೆಯ ಆವರಣದಲ್ಲಿ ಸಂರಕ್ಷಿಸಿಡಲಾಗಿದೆ. ಈ ಜಿಲ್ಲೆಯ ಮೂಲೆ ಮೂಲೆಯಿಂದ ಸಂಗ್ರಹಿಸಿರುವ ಪ್ರಾಚ್ಯಾವಸ್ತುಗಳನ್ನು ಪ್ರದರ್ಶನಕ್ಕಾಗಿ ಇಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಯ ಚರಿತ್ರೆಯ ಮೇಲೆ ಅಪಾರವಾದ ಬೆಳಕು ಚೆಲ್ಲಲು ಸಹಕಾರಿಯಾಗಿದೆ.

**ರಾಮೇಶ್ವರ ದೇವಾಲಯ**

ಶ್ರೀರಾಮೇಶ್ವರ ದೇವಾಲಯ ಮೊದಲು ಊರ ಹೊರ ವಲಯದ ಸೀಗೆಹಟ್ಟಿಯ ಮಧ್ಯ ಇತ್ತತೆ ಚೌಡಪ್ಪನಾಯಕನ ಮನೆಯ ಹಸು ಪ್ರತಿದಿನ ಈ ಹುತ್ತದಲ್ಲಿ ಲಿಂಗಕ್ಕೆ ಹಾಲು ಕರೆಯುತ್ತಿತ್ತು. ಇದನ್ನು ಒಮ್ಮೆ ಚೌಡಪ್ಪನಾಯಕನಿಗೆ ಈ ವಿಷಯವು ತಿಳಿಯಿತು. ಆಗ ಆ ಪೊದೆಗಳನ್ನು ತೆಗೆಸಿ ನೋಡಿದಾಗ;

ಅಲ್ಲಿ ಲಿಂಗವಿದ್ದುದನ್ನು ನೋಡಿ ತೃಣಕುಟಿ ನಿರ್ಮಿಸಿದ್ದನಂತೆ ಅನಂತರ ಕೆಳದಿ ಒಡೆಯನಾದ ಮೇಲೆ ದೇವಾಲಯವನ್ನು ಚೌಡಪ್ಪನಾಯಕನು ಕ್ರಿ.ಶ.1517ರಲ್ಲಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ಈ ಲಿಂಗಕ್ಕೆ ಮೊದಲು ಹುಲ್ಲಿನಲ್ಲಿ ಮನೆ ಮಾಡಿಸಿ ಪೂಜಾದಿಗಳಿಗೆ ವ್ಯವಸ್ಥೆ ಮಾಡಿಸಿದನು. ಈ ಪ್ರದೇಶದ ಹಿಂದಿನ ತಲೆಮಾರಿನ ಸ್ಥಳೀಕರು ಕಾಡಿನಲ್ಲಿಯೂ ಒಂದು ಈಶ್ವರ ದೇವಾಲಯ ಅವಶ್ಯಕತೆಗಳನ್ನು ಕೆಲವು ವಿಷಯಗಳ ಹಿಂದೆ ನೋಡಿರುವುದಾಗಿ ಹೇಳುತ್ತಾರೆ. ಕ್ರಿ.ಶ.1509ರ ಶಾಸನವೊಂದು ವಿಜಯನಗರದ ವೆಂಕಟಾದ್ರಿ ಯಜಮಾನರ ಪುತ್ರನಾದ ನರಸಿಂಹ ಯಜಮಾನನ ಪುತ್ರನಾದ ನರಸಪ್ಪ ದೈವಜ್ಞ ಯಜಮಾನರಿಗೆ ಶ್ರೀಸದಾಶಿವನಾಯಕರು ಮತ್ತು ಕ್ರಿ.ಶ. 1556ರವರೆಗೆ ಈ ಮನೆತನದವರು ಪೂಜೆ ಪುನಸ್ಕಾರ ಮಾಡಿಕೊಂಡು ಬಂದಿದ್ದರು ಎಂಬ ಉಲ್ಲೇಖಗಳಿವೆ.

**ಕೆಳದಿ ವಸ್ತು ಸಂಗ್ರಹಾಲಯ**

ಗ್ರಾಮಾಂತರ ಪ್ರದೇಶದಲ್ಲಿ ತುಂಬ ಅಪರೂಪ ಎನ್ನಬಹುದಾದ ಕೆಳದಿ ಇತಿಹಾಸವನ್ನು ಸಮಗ್ರವಾಗಿ ಕಣ್ಮುಂದೆ ನಿಲ್ಲಿಸುವ ಮತ್ತು ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ ಕೀರ್ತಿಗೆ ಕೆಳದಿ ಗುಂಡಾಜೋಯಿಸರಿಗೆ ಸಲ್ಲುತ್ತದೆ. ಕೆಳದಿ ಗುಂಡಾಜೋಯಿಸರು ಹಿಂದಿನಿಂದಲೂ ಜಿಲ್ಲೆಯಾದ್ಯಂತ ನಾಡಿನದಲ್ಲೆಡೆ ಸಂಚರಿಸಿ, ಕೆಳದಿ ರಾಜ್ಯಕ್ಕೆ ಸಂಬಂಧಿಸಿದ ವಸ್ತುಗಳನ್ನು, ಕಡತಗಳನ್ನು, ಸಂಗ್ರಹಿಸಿ ವ್ಯವಸ್ಥಿತವಾಗಿ ಪ್ರದರ್ಶಿಸುತ್ತಾ ಬಂದಿದ್ದಾರೆ. ನೂರಾರು ಇತಿಹಾಸ ಆಸಕ್ತರಿಗೆ ಮಾರ್ಗದರ್ಶನಮಾಡಿದ್ದಾರೆ. ಕೆಳದಿ ರಾಜ್ಯಕ್ಕೆ ಸಂಬಂಧಿಸಿದಂತೆ ಪ್ರಕಟವಾದ ಬಹುಪಾಲು ಗ್ರಂಥವನ್ನು ಒಳಗೊಂಡ ಗ್ರಂಥಭಂಡಾರ ತಾಳೆಗರಿಗಳ ವೈಜ್ಞಾನಿಕ ರೀತಿಯ ಸಂರಕ್ಷಣೆಯ ಕೇಂದ್ರ ನೋಡುತ್ತವೆ. ಕೆಳದಿ ವಸ್ತು ಸಂಗ್ರಹಾಲಯವನ್ನು ಅಧ್ಯಯನಕ್ಕೆ ಪೂರಕವಾಗುವಂತೆ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸಿದ್ದಾರೆ.

**ಇಕ್ಕೇರಿ**

ಐತಿಹಾಸಿಕ ಕೆಳದಿ ರಾಜ್ಯದ ದ್ವಿತಿಯ ರಾಜಧಾನಿ ಇಕ್ಕೇರಿ ಯಾಗಿದೆ. ಶಿವಮೊಗ್ಗ ಜಿಲ್ಲೆ ಸಾಗರದಿಂದ ದಕ್ಷಿಣಕ್ಕೆ 4 ಕಿ.ಮೀ. ದೂರದಲ್ಲಿದೆ. ಕ್ರಿ.ಶ. 1514–1638ರವರೆಗೆ ಇಕ್ಕೇರಿ ಅಂದು ಭವ್ಯವಾಗಿ ಮೆರೆದ ಸ್ಥಳವಾಗಿದೆ. ಹಾಗೂ ಕೆಳದಿ ಸಾಮ್ರಾಜ್ಯದ ರಾಜಧಾನಿಯಾಗಿ ವೈಭವದಿಂದ ಕೂಡಿದ ಸಂಪದ್ಭರಿತವಾಗಿದ್ದ ನಗರವಾಗಿತ್ತು. ಇಕ್ಕೇರಿ ಪಟ್ಟಣ ಕ್ರಿ.ಶ. 1511–1512ರ ಸುಮಾರಿಗೆ ನಿರ್ಮಾಣವಾಗಿದ್ದು ಅತ್ಯಂತ ವೈಭವಯುತವಾಗಿತ್ತು ಹಿಂದೆ ಇಕ್ಕೇರಿಯನ್ನು ಸಂದರ್ಶಿಸಿದ ಪ್ರವಾಸಿ ತಾಣವೇ ಆಗಿತ್ತು. ಇಕ್ಕೇರಿ ಪಟ್ಟಣವು ತುಂಬಾ ವಿಶಾಲವಾಗಿದ್ದು, ನೆರಳನ್ನು ನೀಡಲು ದೊಡ್ಡ ದೊಡ್ಡ ಮರಗಳಿವೆ, ಅಲ್ಲಿ ಅನೇಕ ಕೆರೆಗಳು ಉದ್ಯಾನಗಳು ಕಂಡುಬರುತ್ತದೆ. ಕೆಳದಿಯಲ್ಲಿದ್ದ ರಾಜಧಾನಿಯನ್ನು ಚೌಡಪ್ಪನಾಯಕನ ಮಗ ಸದಾಶಿವನಾಯಕನು ಕೆಳದಿಯಿಂದ ಇಕ್ಕೇರಿಗೆ ಕ್ರಿ.ಶ. 1514ರ ಆಸುಪಾಸಿನಲ್ಲಿ ರಾಜಧಾನಿಯನ್ನು ಬದಲಾಯಿಸಿದನು. ಹೊಸ ರಾಜಧಾನಿಯನ್ನು ಅತ್ಯಂತ ವ್ಯವಸ್ಥಿತವಾಗಿ ಸುಂದರವಾಗಿ ನಿರ್ಮಿಸಿದನು.

ಅನಂತರ ದೊಡ್ಡ ಸಂಕಣ್ಣನಾಯಕ, ರಾಮರಾಜನಾಯಕ, ಹಿರಿಯ ವೆಂಕಟಪ್ಪನಾಯಕ, ವೀರಭದ್ರನಾಯಕನು ಇಕ್ಕೇರಿ ಪಟ್ಟಣ ನಿರ್ಮಾಣ ಮಾಡಿದ್ದಲ್ಲದೆ ರಂಗಮಂದಿರವನ್ನು ನಿರ್ಮಿಸಿದನು.

**ಅಘೋರೇಶ್ವರ ದೇವಾಲಯ**

ಶಿವಮೊಗ್ಗ ಕೆಳದಿಯ ಅರಸರ ರಾಜಧಾನಿಯಾಗಿದ್ದ ಇಕ್ಕೇರಿ ಪ್ರವಾಸಿಗರು ನೋಡಬೇಕಾದ ಮತ್ತೊಂದು ಐತಿಹಾಸಿಕ ತಾಣವಾಗಿದೆ. ಇಕ್ಕೇರಿ ಅಘೋರೇಶ್ವರ ದೇವಾಲಯ ಅತ್ಯಂತ ಪ್ರಸಿದ್ಧವಾಗಿದೆ. ಚಾಲುಕ್ಯ ಮತ್ತು ಹೊಯ್ಸಳ ವಾಸ್ತುಶಿಲ್ಪ ಶೈಲಿಯ ಸಂಗಮದಂತಿರುವ ಈ ದೇವಾಲಯ ಮಲೆನಾಡಿನ ಶಿಲ್ಪಕಲೆಗೆ ಒಂದು ಉತ್ತಮ ನಿದರ್ಶನವಾಗಿದೆ. ಅಪೂರ್ವವಾದ ಮತ್ತು ವಿಶಿಷ್ಟ ದೇವಾಲಯವಾಗಿದೆ. ದ್ರಾವಿಡ ಶೈಲಿಯ ಮತ್ತು ಭಾರತೀಯ ಇಸ್ಲಾಂ ವಾಸ್ತು ಶೈಲಿಯ ಅಘೋರೇಶ್ವರ ದೇವಾಲಯವು ಆಗಿದೆ. ಅಘೋರೇಶ್ವರ ದೇವಾಲಯವು ಅತ್ಯಂತ ಆಕುಷುಜಕುವಾಗಿದ್ದು ಇದನ್ನು ದೊಡ್ಡ ಸಂಕಣ್ಣನಾಯಕನು ಕ್ರಿ.ಶ. 1546-1559ರ ಅವಧಿಯಲ್ಲಿ ಕಟ್ಟಿಸಿದರು. ಮೂವತ್ತೆರಡು ಕೈಗಳ ಬೃಹತ್ ಶ್ರೀಅಘೋರೇಶ್ವರನನ್ನು ಸ್ಥಾಪಿಸಿ ಆಗಮೊಕ್ತ್ತ ರೀತಿಯಲ್ಲಿ ಕಟ್ಟಲೆ ಪ್ರಕಾರ ಪೂಜಾದಿಗಳಿಗೆ ವ್ಯವಸ್ಥೆ ಮಾಡಿದ್ದಾರೆ ಎಂದು ತಿಳಿದುಬರುತ್ತದೆ. ಈ ಮೂರ್ತಿಯು ಬೇರೆಲ್ಲಿಯೂ ನೋಡಲಾಗುವುದಿಲ್ಲ. ಅಂತಹ ವಿಶಿಷ್ಟ ಲಕ್ಷಣವನ್ನು ಈ ಮೂರ್ತಿ ಹೊಂದಿದೆ. ಈ ದೇವಾಲಯವು ತನ್ನದೇ ಆದ ಕೆಳದಿ ಸಾಮ್ರಾಜ್ಯದ ವಾಸ್ತು ಶೈಲಿಯನ್ನು ಹೊಂದಿದೆ. ಅಘೋರೇಶ್ವರನು ಈಶ್ವರನ ಒಂದು ಸ್ವರೂಪ ಎಂದು ನಂಬಲಾಗಿದೆ.

**ನಂದಿ ಮಂಟಪ**

ಅಘೋರೇಶ್ವರ ದೇವಾಲಯದ ಮುಂದಿರುವ ನಂದಿ ಮಂಟಪವೂ ಆಕರ್ಷಣೀಯವಾಗಿದ್ದು ಮತ್ತು ಕಲಾತ್ಮಕವಾಗಿದೆ. ಕಣಶಿಲೆಯಿಂದ ನಯವಾಗಿ ಸುಂದರವಾಗಿ ನಿರ್ಮಿತವಾಗಿರುವ ಬೃಹತ್ ನಂದಿ ವಿಗ್ರಹವು ಇದಾಗಿದೆ. ಸುಮಾರು 4 ಅಡಿ ಎತ್ತರದ ಜಗುಲಿಯ ಮೇಲಿದ್ದು ಚತುರ ಪ್ರಕಾರದ ದ್ರಾವಿಡ ಶೈಲಿಯ ಕಂಬಗಳಿವೆ. ನಂದಿಯು ಅಘೋರೇಶ್ವರನತ್ತ ಮುಖಮಾಡಿ ಕುಳಿತಿರುವ ಶಿಲಾ ವಿಗ್ರಹವು ತುಂಬಾ ಮೋಹಕವಾಗಿದೆ. ಕಂಬಗಳ ಮೇಲೆ ಗೋಡೆಗಳ ಮೇಲೆ ವಿವಿಧ ಆಕೃತಿಗಳನ್ನು ಕೆತ್ತಲಾಗಿದ್ದು. ಇದು ಏಳು ಚೂಪು ತಲೆಯ ಕಮಾನು ಬಾಗಿಲು ಒಳಗೊಂಡಿದೆ ಮತ್ತು ಕಮಾನುಗಳಲ್ಲಿ ಮಧ್ಯದಲ್ಲಿ ಶಿಲ್ಪಗಳಿವೆ.

**ಕವಲೇದುರ್ಗ**

ಶಿವಮೊಗ್ಗದಿಂದ 70 ಕಿ.ಮೀ. ದೂರದಲ್ಲಿರುವ ತೀರ್ಥಹಳ್ಳಿಯು ಅಚ್ಚ ಮಲೆನಾಡು ಪ್ರದೇಶವಾಗಿದೆ. ತುಂಗಾನದಿಯ ದಡದ ಮೇಲಿರುವ ಮುಖ್ಯ ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರವಾಗಿದೆ. ಈ ಊರಿನ ಪಕ್ಕದಲ್ಲಿಯೇ ತುಂಗಾನದಿಯಲ್ಲಿ ಪರಸುರಾಮನು ತನ್ನ ತಾಯಿ ರೇಣುಕೆಯನ್ನು ಕತ್ತರಿಸಿದ ಕೊಡಲಿಯ ರಕ್ತವನ್ನು ಈ ನದಿಯ ನೀರಲ್ಲಿ ತೊಳೆಯಲು ರಕ್ತವಾಯಿತು. 1941ರಲ್ಲಿ ನದಿಗೆ ಅಡ್ಡವಾಗಿ ಕಟ್ಟಿರುವ 183 ಮೀಟರ್ ಉದ್ದದ ಸ್ಪ್ರಿಂಗ್ ಸೇತುವೆ ಪ್ರಮುಖ

ಆಕರ್ಷಣೀಯವಾಗಿದೆ. ಇಲ್ಲಿ ಸ್ಥಾಪಿತವಾಗಿರುವ ರಾಮಚಂದ್ರಪುರ ಮಠ ಮತ್ತು ಪುತ್ತಿಗೆ ಮಠ ಧಾರ್ಮಿಕತೆಯ ಸಂಕೇತವಾಗಿ ನಿಂತಿವೆ. ಪ್ರತಿವರ್ಷ ಡಿಸೆಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ಜರುಗುವ ಎಳ್ಳಮಾವಾಸ್ಯೆ ರಾಮೇಶ್ವರ ದೇವರ ರಥೋತ್ಸವ, ತೀರ್ಥಸ್ನಾನ ಮಾಡುವ ವಾಡಿಕೆ ಇದೆ. ಸಹಸ್ರಾರು ಜನ ಮಾರ್ಗಶಿರ ಅಮಾವಾಸ್ಯೆಯಂದು ತೀರ್ಥಸ್ನಾನ ಮಾಡಿ ಪುನೀತರಾಗುತ್ತಾರೆ. ತೀರ್ಥಹಳ್ಳಿ ಪಟ್ಟಣಕ್ಕೆ ಹೊಂದಿಕೊಂಡು ನಿಂತಿರುವ ಸಿದ್ಧೇಶ್ವರ ಗುಡ್ಡ, ಆನಂದಗಿರಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಬಹುದು. ಪ್ರಾಚೀನ ಕಾಲದ ಚರ್ಚು ಮತ್ತು ಮಸೀದಿಗಳನ್ನು ಕಂಡುಬರುತ್ತದೆ.

**ಕವಲೇದುರ್ಗದ ಕೋಟೆ**

ಒಂದು ಕಾಲದಲ್ಲಿ ಕೆಳದಿ ಅರಸರ ಆಡಳಿತಕ್ಕೆ ಒಳಪಟ್ಟಿದ್ದ ತೀರ್ಥಹಳ್ಳಿ ಈಗಿನ ಕವಲೇದುರ್ಗವನ್ನು ಆಗ ಭುವನಗಿರಿ ದುರ್ಗವೆಂದು ಕರೆಯುತ್ತಿದ್ದರು. ಕೆಳದಿ ನಾಯಕರ ರಕ್ಷಣೆಯಲ್ಲಿದ್ದ ಕವಲೇದುರ್ಗ ಕೋಟೆ ಸಮುದ್ರ ಸಮುದ್ರ ಮಟ್ಟಕ್ಕಿಂತ ೨೬೨ ಮೀ. ಎತ್ತರವಿರುವ ಬೆಟ್ಟ ಹಾಗೂ ಐತಿಹಾಸಿಕ ಕೋಟೆಯು ಇದಾಗಿದೆ. ಈ ಪ್ರದೇಶದಲ್ಲಿರುವ ದೇವಾಲಯಗಳು ಮತ್ತು ಸ್ಥಳಗಳು ಐತಿಹಾಸಿಕ, ಪೌರಾಣಿಕ ಮತ್ತು ಚಾರಿತ್ರಿಕ ಮಹತ್ವವನ್ನು ತಿಳಿಸುತ್ತವೆ. ಕೆಳದಿ ವೆಂಕಪಟ್ಟನಾಯಕನು ಕೋಟೆಯೊಳಗೆ ಕೆಲವು ಕಟ್ಟಗಳನ್ನು ಕಟ್ಟಿಸಿದ್ದಾನೆ. ಕೋಟೆಯ ಆವರಣದಲ್ಲಿ ಅರಮನೆ, ಮಹತ್ತಿನ ಮಠ ಶೃಂಗೇರಿಮಠ ಟಂಕಸಾಲೆ ಆನೆ ಮತ್ತು ಕುದುರೆಲಾಯಗಳಿದ್ದು ಇಲ್ಲಿ ಕೊಳಗಳು ಮತ್ತು ನೀರಿನ ವ್ಯವಸ್ಥೆಯನ್ನು ಮಾಡಿ ಇದನ್ನು ಸುಸಜ್ಜಿತ ಅಗ್ರಹಾರವನ್ನಾಗಿ ಮಾಡಿದ್ದಾರೆ. ನೈಸರ್ಗಿಕವಾದ ಗುಡ್ಡದ ರೂಪದಲ್ಲಿರುವುದನ್ನು ಇಟ್ಟುಕೊಂಡು ದೊಡ್ಡದಾದ ಕಣಶಿಲೆಯ ಕಲ್ಲುಗಳಿಂದ ನಿರ್ಮಿಸಲಾದ ಈ ಏಳು ಸುತ್ತಿನ ಕೋಟೆ ಇದಾಗಿದೆ.

**ಚಂದ್ರಗುತ್ತಿ**

ಚಂದ್ರಗುತ್ತಿಯು ಸಹ್ಯಾದ್ರಿಯ ಗಿರಿಶೃಂಗಗಳಲ್ಲಿ ಅಡಗಿ ಕುಳಿತಿರುವ ಸುಂದರ ಪ್ರಕೃತಿಧಾಮ ಮತ್ತು ಐತಿಹಾಸಿಕ ಸ್ಥಳವಾಗಿದೆ. ಸಣ್ಣ ಸಣ್ಣ ಬೆಟ್ಟಗಳಿಂದ ಆವೃತವಾದ ಬೃಹತ್ ಶಿಲಾ ವೇದಿಕೆಯಾಗಿದೆ. ಭವ್ಯ ಪ್ರಪಾತಗಲ್ಲು, ಬಂಡೆಗಲ್ಲುಗಳ ಮೇಲ್ ಬಂಡೆಗಲ್ಲು ಕುಸಿತಂತೆ ಒಂದಕ್ಕೊಂದು ಪ್ರೀತಿಯ ಆವೇಶದಿಂದ ಮೈಮರೆತು ಅಪ್ಪಿಕೊಂಡಂತೆ, ಬಿಟ್ಟು ಆಗಾರೆಂಬಂತಿರುವ ಮಧುರ ಮೈತ್ರಿ ಶಿಲಾಕಲ್ಲುಗಳು ಇಲ್ಲಿ ಹೆಚ್ಚಿನ ರೀತಿಯಲ್ಲಿ ಕಂಡುಬರುತ್ತವೆ. ಇಂತಹ ನಯನ ಮನೋಹರವಾದ ಪ್ರಕೃತಿ ನಿರ್ಮಿತ ಪ್ರಶಾಂತ ವರದಾ ನದಿಯ ದಡದಲ್ಲಿ ಅರಳಿನಿಂತಿರುವ ಊರಾಗಿದೆ. ಚಂದ್ರಗುತ್ತಿಯು ಒಂದು ಮಾತೃಸ್ಥಳವಾಗಿದೆ. ಶಿವಮೊಗ್ಗ ಜಿಲ್ಲೆಯ ಸೊರಬದಿಂದ 17 ಕಿ.ಮೀ. ದೂರದಲ್ಲಿದೆ. ಈ ಸ್ಥಳವು ಸುತ್ತಮುತ್ತಲಿನ ಹಸಿರು ವನರಾಜಿಗಳ ಹಾಗೂ ಗದ್ದೆ ಬಯಲುಗಳ ಬೈತಲೆಯನ್ನು ಸೀಳಿಕೊಂಡು ಭವ್ಯವೂ ಆದ ಬೆಟ್ಟದ ಅಡಿಯಲ್ಲಿ ಅವಿತಿದೆ ಮತ್ತು ಸಮುದ್ರ ಮಟ್ಟದಿಂದ (೨೮೩೬ ಅಡಿ) ಎತ್ತರದಲ್ಲಿರುವ ಈ ಬೆಟ್ಟದ ಸೌಂದರ್ಯವನ್ನು ಹೊಂದಿರುತ್ತದೆ. ನಿತ್ಯ ಹರಿದ್ವರ್ಣದ ದಟ್ಟವಾದ ಕಾಡು ಮೈಚೆಲ್ಲಿದ್ದು. ಇಲ್ಲಿ

ಅಪರೂಪದ ಪ್ರಾಣಿ ಪಕ್ಷಿಗಳ ಸಂತತಿ ಇದ್ದು ಕೀಟಗಳು, ಗಿಡ ಮೂಲಿಕೆಗಳು ಇದ್ದು. ಈ ನಿಸರ್ಗ ಕೇಂದ್ರವು ತಂಪಾಗಿದ್ದು ಗಂಗನಚುಂಬಿ ಮರಗಿಡಗಳು ನಿಸರ್ಗ ರಮಣೀಯತೆಯ ಮಧ್ಯೆ ಭವ್ಯವಾದ ಕೋಟೆ ತಲೆ ಎತ್ತಿ ನಿಂತಿದೆ ಎಂದು ಹೇಳಲಾಗುತ್ತದೆ.

**ಬಿದನೂರು**

ಮುಗಿಲೆತ್ತರದ ಬೆಟ್ಟಗಳು, ಮನಮುಟ್ಟುವ ಮೋಡಗಳು, ನಾಚಿಕೆಯಿಂದ ನಲಿಯುವ ಜಲಪಾತಗಳು ಇಲ್ಲಿನ ಐಸಿರಿಗಳು ಕಾಡಿನ ನಡುವೆ ಸುಖವಾಗಿದ್ದ ಅನೇಕ ಊರುಗಳು ಇಲ್ಲಿ ಕಣ್ಮರೆಯಾಗಿವೆ. ಜನರ ಕಣ್ಣೀರಿನ ಮೇಲೆ ಜಲಾಶಯದ ನೀರು ಆವರಿಸಿಕೊಂಡು ಎತ್ತ ನೋಡಿದರತ್ತ ರಾಶಿ ರಾಶಿ ನೀರು ಇಲ್ಲಿ ನೆಲೆ ನಿಂತಿದೆ. ಧೋ ಎಂದು ಸುರಿಯುವ ಮಳೆಯು ಹಾವಿನಂತೆ ಹೊರಳಿ ನಿಂತ ರಸ್ತೆಗಳು, ಕಣ್ಣಿಗೆ ಹುಚ್ಚು ಹಿಡಿಸುವ ಕಾಡೇ ಇಲ್ಲಿನ ಪರಿಸರವಾಗಿದೆ. ತನ್ನ ಒಡಲೊಳಗೆ ನೀರನ್ನು ಕಾಡನ್ನು ಹೊಂದಿರುವ ಸುಂದರ ತಾಲ್ಲೂಕು ಹೊಸನಗರವಾಗಿದೆ. ಬಿದನೂರು ನಗರವು ಹೊಸನಗರದಿಂದ 14 ಕಿ.ಮೀ. ದೂರ ಹಾಗೂ ಶಿವಮೊಗ್ಗದಿಂದ ಪಶ್ಚಿಮಕ್ಕೆ 86 ಕಿ.ಮೀ. ದೂರದಲ್ಲಿರುವ ಐತಿಹಾಸಿಕ ಸ್ಥಳವೇ ಬಿದನೂರು. ಬಿದನೂರನ್ನು ವೇಣುಪುರ ಎಂದು ಕರೆಯುತ್ತಿದ್ದರು ಎಂದು ಹಲವು ಶಾಸನಗಳಲ್ಲಿ ತಿಳಿದು ಬಂದಿದೆ. ಕ್ರಿ.ಶ. 16ನೇ ಶತಮಾನದಲ್ಲಿ ಬಿದನೂರು ಎಂಬ ಹೆಸರಿನಿಂದ ಪ್ರಖ್ಯಾತಿ ಪಡೆದಿದೆ.

**ತಾಳಗುಂದ**

ಶಿಕಾರಿಪುರ ತಾಲ್ಲೂಕಿನಲ್ಲಿರುವ ತಾಳಗುಂದವು ಪ್ರಸಿದ್ಧ ಗ್ರಾಮವಾಗಿದೆ. ಶಿಕಾರಿಪುರದಿಂದ 25 ಕಿ.ಮೀ. ಹಾಗೂ ಬಳ್ಳಿಗಾವೆಯಿಂದ ಉತ್ತರಕ್ಕೆ 4 ಕಿ.ಮೀ. ದೂರದಲ್ಲಿದೆ. ಕದಂಬರ ಮೂಲಸ್ಥಾನ ಸ್ಥಾನಕುಂದೂರು ಈಗಿನ ತಾಳಗುಂದವಾಗಿದೆ ಹಿಂದೆ ಇದು ಕದಂಬರ ಕಾಲದ ಪ್ರಸಿದ್ಧ ಅಗ್ರಹಾರ'ವಾಗಿತ್ತು. ತಾಳಗುಂದ ಕರ್ನಾಟಕದ ಅತೀ ಪ್ರಾಚೀನ ಅಗ್ರಹಾರವಾಗಿತ್ತು. ಕುಮುದ್ವತಿ ಬಲದಂಡೆಯ ಮೇಲಿರುವ ಶಿಕಾರಿಪುರ ಅತ್ಯಂತ ಪಾಚೀನ ಇತಿಹಾಸ, ಪೌರಾಣಿಕ ಜಾನಪದ ಐತಿಹ್ಯಗಳು ಪರಂಪರೆಯ ಮುಸುಕು ಹೊತ್ತ ತಾಲ್ಲೂಕು ಇದಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ದೊರೆತಿರುವ ಸುಮಾರು 2000ಕ್ಕೂ ಹೆಚ್ಚು ಶಾಸನಗಳಲ್ಲಿ ಸಿಂಹಪಾಲು ಶಿಕಾರಿಪುರ ತಾಲ್ಲೂಕಿದಾಗಿದೆ. ಐತಿಹಾಸಿಕ ಪ್ರಾಮುಖ್ಯತೆ ಈ ಸ್ಥಳದ ಚರಿತ್ರೆ ಬಲ್ಲವರಿಗೆ ಮಾತ್ರ ಗೊತ್ತು ಎಂದು ಪ್ರಸಿದ್ಧ ಸ್ಥಳವೆಂದು ಹೇಳಬಹುದು. ಶಾತವಾಹನರ ಕಾಲದಿಂದ ತಾಳಗುಂದದ ಇತಿಹಾಸ ಆರಂಭವಾಗಿದೆ ಎಂದು ಸಂಶೋಧನೆಗಳಿಂದ ತಿಸಿದು ಬಂದಿದೆ.

**ತಾಳಗುಂದದ ಪ್ರಣವೇಶ್ವರ ದೇವಾಲಯ**

ಕರ್ನಾಟಕದ ದೇವಾಲಯಗಳಲ್ಲಿ ಪ್ರಣವೇಶ್ವರ ದೇವಾಲಯವು ಅತ್ಯಂತ ಪ್ರಾಚೀನ ದೇವಾಲಯವಾಗಿದೆ. ಕದಂಬರ ಕಾಲದಲ್ಲಿ ತಾಳಗುಂದದಲ್ಲಿ ಪ್ರಣವೇಶ್ವರ ದೇವಾಲಯ

ನಿರ್ಮಾಣವಾಗಿದೆ. ಕದಂಬ ಮೃಗೇಶವರ್ಮನ ಕಾಲದಲ್ಲಿ ಈ ದೇವಾಲಯ ರಾಜಮನೆತನದ ಮೇಲೆ ಗೌರವ, ಪ್ರೀತಿಯನ್ನು ಮೂಡಿಸಿದೆ. ಮೃಗೇಶ್ವರವರ್ಮನ ಇಷ್ಟದೈವ ಪ್ರಣವೇಶ್ವರ ದೇವರಾಗಿತ್ತು. ಈ ದೇವಾಲಯ ವಿಶಾಲವಾದ ಕೆರೆಯ ಪಕ್ಕದಲ್ಲಿರುವುದು ನೋಡುತ್ತೇವೆ. ಶಾತವರ್ಣಿ ಚಕ್ರವರ್ತಿಗಳು ಕೂಡ ಈ ದೇವರನ್ನು ಪೂಜಿಸುತ್ತಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಕದಂಬರ ಅರಸರ ಮೃಗೇಶವರ್ಮನ ಹೆಂಡತಿ ಪ್ರಭಾವತಿರಾಣಿ ಹಾಗೂ ಈತನ ಮಗ ರವಿವರ್ಮನು ಕ್ರಿ.ಶ. 450ರಲ್ಲಿ ದೇವಾಲಯವನ್ನು ಕಲ್ಲಿನಿಂದ ನಿರ್ಮಿಸಿದ್ದಾರೆ. ಈ ದೇವಾಲಯವು ಶಾತವಾಹನರ ಕಾಲದಲ್ಲಿ ಇಟ್ಟಿಗೆಯಲ್ಲಿ ನಿರ್ಮಿಸಲಾಗಿದ್ದು ಇದರ ತಳಪಾಯದ ಗುರುತು ಈಗಲೂ ನೋಡಬಹುದು. ಪ್ರಣವೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ. ಇದರ ತಲ ವಿನ್ಯಾಸವು ಚತುರಸ್ರಾಕಾರವಾಗಿದೆ. ಸುಮಾರು 50 ವರುಷಗಳ ಹಿಂದೆ ಈ ದೇವಾಲಯದ ಹಳೆಯ ಗೋಡೆಯನ್ನು ತೆಗೆದು ಅವುಗಳಲ್ಲಿ ಕೆಲವೊಂದು ಉಪಯೋಗಿಸಿ ದೇವಾಲಯ ಜೀರ್ಣೋದ್ದಾರ ಮಾಡಿದ್ದಾರೆ.

**ಬಳ್ಳಿಗಾವೆ**

ಬಳ್ಳಿಗಾವೆಯು ಶಿಕಾರಿಪುರದಿಂದ ಸುಮಾರು 21 ಮೀ. ದೂರದಲ್ಲಿರುವ ಪ್ರಮುಖ ಐತಿಹಾಸಿಕ ಕೇಂದ್ರವಾಗಿದೆ. ಇದು ಪ್ರಾಚೀನ ಕರ್ನಾಟಕದಲ್ಲಿ ಪ್ರಖ್ಯಾತ ಸಾಂಸ್ಕೃತಿಕ ಕೇಂದ್ರವಾಗಿದೆ. ಅನೇಕ ಪ್ರಾಚೀನ ಶಿಲ್ಪಕಲೆಯುಳ್ಳ ದೇವಾಲಯಗಳಿಂದಲೂ ಮತ್ತು ಶಾಸನಗಳಿಂದಲೂ ಶೋಭಿಸುತ್ತಲಿದೆ. ಅನೇಕ ಅಗ್ರಹಾರಗಳಿಂದ ಕೂಡಿದ ಬಳ್ಳಿಗಾವೆ ಹಿಂದೆ ಒಂದು ವಿಶ್ವವಿದ್ಯಾಲಯವಾಗಿ ಮೆರೆದಿದೆ. ಅಂದಿನ ಕಾಲದ ಮಹಾಪಟ್ಟಣಗಳಲ್ಲಿ ಒಂದಾದ ಬಳ್ಳಿಗಾವೆ ಸಕಲ ಸಂಪತ್ತಿನ ನಾಗರೀಕತೆಯ ನಗರವಾಗಿ ಖ್ಯಾತಿಯನ್ನು ಪಡೆದುಕೊಂಡಿದೆ. ಬನವಾಸಿಯ ನಾಡಿನ ರಾಜಧಾನಿಯಾಗಿ ವಿದ್ಯಾ ಕೇಂದ್ರವಾಗಿ ಬಳ್ಳಿಗಾವೆ ಮೆರೆದಿದೆ ಮತ್ತು ಇದು ಅನೇಕ ಪಟ್ಟಣಗಳಿಗೆ ತವರು ಮನೆಯಾಗಿತ್ತು. ಪ್ರಸ್ತುತದಲ್ಲಿ ಶಿವಮೊಗ್ಗ ಜಿಲ್ಲೆಯ ಪ್ರಮುಖ ಐತಿಹಾಸಿಕ ತಾಣವಾಗಿದ್ದು. ದೇಶ ವಿದೇಶಿಗರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಸ್ಥಸಕ್ಕೆ ಭೇಟಿ ನೀಡುತ್ತಿದ್ದರು. ಬಳ್ಳಿಗಾವೆಯು ಪ್ರಕೃತಿ ಪ್ರಿಯರಿಗೆ ರಮಣೀಯ ತಾಣವಾಗಿ, ಇತಿಹಾಸ ಸಂಶೋಧಕರಿಗೆ ಗತವಿಚಾರ ತಿಳಿಸುವ ನೆಲೆಯಾಗಿ, ಭಕ್ತಾದಿಗಳ ಭಕ್ತಿಯ ತಾಣವಾಗಿ, ಕಲಾರಸಿಕರಿಗೆ ಕಲಾತ್ಮಕ ಕೆತ್ತನೆಯ ಶಿಲ್ಪಕಲೆಯ ನೆಲ್ ವೀಡಾಗಿ ಅರಸಿನಿಂತಿದೆ ಇಲ್ಲದೇ ಇರುವ ಕನ್ನಡ ಮತ್ತು ಸಂಸ್ಕೃತ ಭಾಷೆಯ ಸುಮಾರು 100ಕ್ಕೂ ಹೆಚ್ಚು ಶಾಸನಗಳು, ಅಸಂಖ್ಯ ದೇವಾಲಯಗಳು, ಪ್ರಾಚೀನ ಪಳೆಉಳಿಕೆಗಳು ಈ ನಾಡಿನ ಇತಿಹಾಸವನ್ನು ತನ್ನ ಗರ್ಭದಲ್ಲಿ ಹುದುಗಿಸಿಕೊಂಡು ಆಸಕ್ತಿ ಇತಿಹಾಸಕಾರರನ್ನು ಆಕರ್ಷಿಸುತ್ತದೆ. ಪ್ರಾಚೀನವಾಗಿ ಬಳ್ಳಿಗಾವೆಯು ಬಲಿಚಕ್ರವರ್ತಿಯ ರಾಜಧಾನಿಯಾಗಿದ್ದು 'ಬಲಿಪುರ' ಎಂಬ ಹೆಸರಿತ್ತು.

**ಕೇದಾರೇಶ್ವರ ದೇವಾಲಯ**

ಶಿರಾಳಕೊಪ್ಪಳದಿಂದ ಬಳ್ಳಿಗಾವೆಗೆ ಹೋಗುವ ಕೆರೆ ಏರಿ ಮೇಲೆ ಮೊದಲು ಕಾಣುವುದೇ ಪ್ರಸಿದ್ಧವಾದ ಕೇದಾರೇಶ್ವರ ದೇವಾಲಯವಾಗಿದೆ. ಕಲ್ಯಾಣ ಚಾಲುಕ್ಯರ ಶೈಲಿಯ ಮೊದಲ ಹಂತದ ತ್ರಿಕೂಟಾಚಲ ದೇವಾಲಯವಾಗಿದೆ. ಕೇದಾರವೆಂದೇ ಹೆಸರಾಗಿರುವ ದೇವಾಲಯದ ನಿರ್ಮಾಣವು 1103ರಲ್ಲಿ ಆಗಿರುವ ಸಾಧ್ಯತೆ ಇದೆ. ಈ ದೇವಾಲಯ ಕಲ್ಯಾಣಿ ಚಾಲುಕ್ಯ'ರ ಕಾಲದಲ್ಲಿ ನಿರ್ಮಾಣವಾದುದು. ದಕ್ಷಿಣ ಕೇದಾರವೆಂದೇ ಹೆಸರಾಗಿದ್ದ ದೇವಾಲಯದ ನಿರ್ಮಾಣವಾಗಿದೆ. ಬಳ್ಳಿಗಾವೆಯ ದೇವಾಲಯಗಳಲ್ಲಿ ಪ್ರಮುಖ ದೇವಾಲಯವಾಗಿದ್ದು ಚಾಲುಕ್ಯ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಈ ದೇವಾಲಯವನ್ನು ತಾವರೆ ಕೆರೆಯ ಎದುರಿನ ದಂಡೆಯ ಮೇಲೆ ನಿರ್ಮಿಸಲಾಗಿದೆ. ಇದನ್ನು ಕ್ರಿ.ಶ. ಸುಮಾರು 1060ರಲ್ಲಿ ವಿನಯಾದಿತ್ಯ ಹೊಯ್ಸಳನು
ಚಾಲುಕ್ಯರ ಸಾಮಂತನಾಗಿ ಬನವಾಸಿಯನ್ನು ಆಳುತ್ತಿದ್ದಾಗ ಕಟ್ಟಿಸಿರಬಹುದೆಂದು ತಿಳಿದುಬರುತ್ತದೆ. ಈ ದೇವಾಲಯ 11ನೇ ಶತಮಾನದಿಂದ 12ನೇ ಶತಮಾನದವರೆಗೂ ಬೇರೆ ಬೇರೆಯವರ ಅಡಿಯಲ್ಲಿ ಹಂತ ಹಂತವಾಗಿ ರಚನೆಯಾಗಿದೆ. ಇದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದ್ದು ಹೊಯ್ಸಳರ ಅಧೀನಕ್ಕೆ ಬನವಾಸಿ 12000 ಪ್ರಾಂತ್ಯಕ್ಕೆ ಬಂದ ಮೇಲೆ ಬಳ್ಳಿಗಾವೆಯು ಈ ದೇವಾಳಯದ ಶಿಖರದ ಬಳಿ ಹೊಯ್ಸಳ ಲಾಂಛನವನ್ನು ಅಳವಡಿಸಿರುವುದನ್ನು ಕಾಣಬಹುದು.

**ನಾಡಕಳಸಿಯಲ್ಲಿನ ಅವಳಿ ದೇವಾಲಯಗಳು**

ಸಾಗರ ಪಟ್ಟಣವು ಐತಿಹಾಸಿಕ ಸ್ಥಸವಾಗಿದ್ದು, ಸಾಗರ ಚಕ್ರವರ್ತಿಯಿಂದ 'ಸಾಗರ' ಎಂಬುದಾಗಿ ಉದ್ಭವಿಸಿತ್ತು ಎಂದು ತಿಳಿಯುತ್ತದೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ 8 ಕಿ.ಮೀ ದೂರದಲ್ಲಿರುವುದೇ ನಾಡಕಳಸಿಯಾಗಿದೆ. ಸಾಗರದಿಂದ ಈಶಾನ್ಯದ ಕಾಡಿನಲ್ಲಿರುವ ನಾಡಕಲೆಸಿ ಗ್ರಾಮವು ಹೊಯ್ಸಳರ ಕಾಲದಲ್ಲಿ ಪ್ರಸಿದ್ಧ ಅಗ್ರಹಾರ'ವಾಗಿತ್ತು. ಹಚ್ಚ ಹಸುರಿನ ವನಗ'ಳ ನಡುವೆ ಇರುವ ಒಂದೇ ಒಂದು ಹಳ್ಳಿಯಾಗಿತ್ತು. ಸರಿಸುಮಾರು 800 ವರ್ಷಗಳ ಹಿಂದೆ 'ಕಳಸೆನಾಡು' ಎಂಬ ಈ ಚಿಕ್ಕನಾಡಿನ ರಾಜಧಾನಿಯಾಗಿತ್ತು. ಹೊಯ್ಸಳರು ಇಲ್ಲಿ ಆಳ್ವಿಕೆ ಮಾಡುವ ಕಾಲದಲ್ಲಿ ಈ ನಾಡು ಹೆಚ್ಚು ಪ್ರಸಿದ್ಧತೆ ಪಡೆದುಕೊಂಡಿತ್ತು. 12ನೇ ಶತಮಾನದಲ್ಲಿ ಬೇಡರ ನಾಯಕನಾದ ಕನಕನಾಯಕನ ವಂಶಸ್ಥರು ಕಲಸೆನಾಡು ಅಥವಾ ನಾಡಕಳಸಿಯನ್ನು ಆಳುತ್ತಿದ್ದರು ಆ ಮೇಲೆ ಹೊಯ್ಸಳರ ಅರಸರ ಅಧೀನದಲ್ಲಿದ್ದ ಸಾಮಂತರ ಆಳ್ವಿಕೆಗೆ ಒಳಪಟ್ಟಿತ್ತು. ಹೊಯ್ಸಳರು ಇಲ್ಲಿ ಸುಮಾರು ವರ್ಷಗಳ ಆಳ್ವಿಕೆ ಮಾಡಿದ್ದಾರೆ. ಬೀರದೇವರಸನೂ ನಾಡಕಳಸಿಯನ್ನು ಆಡಳಿತ ನಡೆಸಿದ್ದಾನೆ. ಹೀಗೆ ಹೊಯ್ಸಳರ ರಾಜ್ಯದಲ್ಲಿ ಸೇರ್ಪಡೆಯಾಗಿ ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುವಾಗ ವಿಜಯನಗರ ಚಕ್ರವರ್ತಿ ಕೃಷ್ಣದೇವರಾಯನು ನಾಡಕಳಸಿಯನ್ನು ತನ್ನ ವಶಕ್ಕೆ ತೆಗೆದುಕೊಂಡು ಕೆಳದಿ ಸ್ಥಾಪಕ ಚೌಡಪ್ಪನಿಗೆ ನಾಡಕಳಸಿಯನ್ನು ಬಳುವಳಿಯಾಗಿ ನೀಡಿದ್ದಾನೆ ಎಂದು ಕುರುಹುಗಳ ಮೂಲಕ ತಿಳಿಯುತ್ತದೆ.

**ಮಲ್ಲಿಕಾರ್ಜುನ ದೇವಾಲಯ**

ಮಲ್ಲಿಕಾರ್ಜುನ ದೇವಾಲಯವು ನಕ್ಷತ್ರಕಾರದ ವೇದಿಕೆಯ ಮೇಲೆ ನಿರ್ಮಾಣಗೊಂಡಿದೆ. ಈ ದೇವಾಲಯವು ಉತ್ತರಾಭಿಮುಖವಾಗಿದ್ದು ದೇವಾಲಯವು ಒಂದು ಗರ್ಭಗೃಹ ಸುಕನಾಸಿ ಹಾಗೂ ತೆರೆದ ಮಂಟಪವನ್ನು ಒಳಗೊಂಡಿದೆ. ಈ ದೇಗುಲ ಗರ್ಭಗೃಹ ಹಾಗೂ ರಂಗಮಂಟಪವನ್ನು ಒಳಗೊಂಡಿದೆ. ಈ ದೇವಾಲಯದ ಗರ್ಭಗೃಹವು 7 ಅಡಿ ಚೌಕಕಾರವಾಗಿದ್ದು, ಪೀಠದ ಮೇಲೆ ಲಿಂಗವು 5 ಅಡಿ ಉದ್ದ 3 ಅಡಿ ಅಗಲವಾಗಿ ಚಪ್ಪಟೆಯಾಗಿದೆ. ಇದರ ದ್ವಾರಬಂದ ಮತ್ತು ಸಾಲು ಹೂವು ಸುರುಳಿ, ಮಣಿಸರಗಳಿಂದ ಅಲಂಕೃವಾಗಿದೆ. ಸುಕನಾಸಿಯ ದ್ವಾರಬಂದವು ಸರಳ ಅಲಂಕಾರ ಹೊಂದಿದೆ. ಇದರ ಮೇಲ್ಭಾಗದಲ್ಲಿ ಪಟ್ಟಿಕೆಯಲ್ಲಿ ತಾಂಡವೇಶ್ವರ, ಇದರ ಬಲಭಾಗದಲ್ಲಿ ಗಣಪತಿ ಹಾಗೂ ಎಡಭಾಗದಲ್ಲಿ ವಿಷ್ಣು ಮತ್ತು ಮಹಿಷಾಸುರ ಮರ್ದಿನಿಯ ಸುಂದರವಾದ ಮೂರ್ತಿಗಳು ಇರುವುದು ವಿಶೇಷವಾಗಿ ಆಕರ್ಷಿಸುತ್ತಿದೆ. ದೇವಾಲಯ ದ್ವಾರದ ಬದಿಗಳಲ್ಲಿ ದ್ವಾರಪಾಲಕ ವಿಗ್ರಹಗಳು ಇವೆ. ದೇವಾಲಯದಲ್ಲಿರುವ ಮಂಟಪವು 3 ದ್ವಾರಗಳನ್ನು ಒಳಗೊಂಡಿದೆ.

**ನೀಲಕಂಠೇಶ್ವರ ದೇವಾಲಯ**

ನೀಲಕಂಠೇಶ್ವರ ದೇವಾಲಯವನ್ನು ಭಿಲ್ಲೇಶ್ವರ, ಸದಾಶಿವ, ರಾಮೇಶ್ವರ, ಸೋಮೇಶ್ವರ ಎಂದು ಹೆಸರಿಸಲಾಗುತ್ತದೆ. ಈ ದೇವಾಲಯವನ್ನು ಕ್ರಿ.ಶ. 1218ರಲ್ಲಿ ಬಾಳೆಯಮ್ಮ ವೆಗ್ಗಡೆಯು ಕಟ್ಟಿಸಿದನೆಂದು ಕ್ರಿ.ಶ. 1218ರ ಶಾಸನವು ತಿಳಿಸುತ್ತದೆ. ಈ ದೇವಾಲಯವು ನಕ್ಷತ್ರಕಾರದ ವೇದಿಕೆಯ ಮೇಲೆ ಉತ್ತರಾಭಿಮುಖವಾಗಿ ನಿರ್ಮಾಣಗೊಂಡಿದೆ. ಈ ದೇವಾಲಯದ ಮೇಲ್ಭಾಗದಲ್ಲಿ ಹೊಯ್ಸಳರ ಚಿಹ್ನೆಯಾದ ಸಳನ ಚಿತ್ರ ಮತ್ತು ಅದರ ಕೆಳಭಾಗದಲ್ಲಿ ನಟರಾಜನ ಚಿತ್ರ ಆಕರ್ಷಣೀಯವಾಗಿದೆ. ನೀಲಕಂಠ ದೇವಾಲಯವು ಸ್ವಲ್ಪ ಭಿನ್ನವಾಗಿದೆ. ಈ ದೇವಾಲಯ ಒಂದು ಗರ್ಭಗೃಹ ಮತ್ತು ಮುಖಮಂಟಪ ಹೊಂದಿದ್ದು, ಸುಕನಾಸಿಯು ಇಲ್ಲಿ ಕಂಡುಬರುವುದಿಲ್ಲ. ಈ ರೀತಿ ಹೊಯ್ಸಳ ಶೈಲಿಯಲ್ಲಿರುವುದು ತೀರಾ ವಿರಳವಾಗಿದೆ. ಗರ್ಭಗೃಹವು ಕಿರಿದಾದ ಪ್ರದಕ್ಷಿಣಾ ಪಥವನ್ನು ಹೊಂದಿದೆ. ಪ್ರದಕ್ಷಿಣಾಪಥ ಇರುವುದು ದ್ರಾವಿಡ ಶೈಲಿ ಲಕ್ಷಣವಾಗಿದೆ. ಗರ್ಭಗೃಹದಲ್ಲಿ ಪೀಠದ ಮೇಲೆ ಸಾಮಾನ್ಯವಾಗಿ ಲಿಂಗವು ಕಂಡುಬರುತ್ತದೆ. ಗರ್ಭಗೃಹದ ದ್ವಾರಬಂದವು ಸರಳವಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಇದೆ. ದೇವಾಲಯದ ಮಂಪಟದಲ್ಲಿರುವ ಮೂರು ಸ್ತಂಭಗಳ ಕೆಳಭಾಗದಲ್ಲಿ ಹೊಯ್ಸಳ ಶಾಸನಗಳು ಕಂಡುಬರುತ್ತವೆ. ಮಂಟಪವು ಕಕ್ಷಾಸನವನ್ನು ಹೊಂದಿದ್ದು. ಅಲ್ಲಿರುವ ಸ್ತಂಭಗಳು 16 ಕೋನವನ್ನು ಹಾಗೂ ಒಂದು ಅಂಕಣದ ಕಂಬಗಳು ಕಂಡುಬರುತ್ತದೆ. ಇದರ ಮೇಲ್ಛಾವಣಿ 12 ಅಂಕಣಗಳನ್ನು ಹೊಂದಿದೆ. ಇವುಗಳೇ ಅಲ್ಲದೆ ಮುಖ ಮಂಪಟದ ದ್ವಾರದ ಬದಿಗಳಲ್ಲಿ ಆನೆಗಳಿವೆ ಇಲ್ಲಿನ ಕಂಬಗಳು ಬೋದಿಗೆಗಳು ಹೂವಿನ ಅಲಂಕಾರದಿಂದ ಕೂಡಿದೆ. ಭಗ್ನವಾದ ಗಣೇಶ, ನಂದಿ ವಿಗ್ರಹಗಳನ್ನು ನೋಡಬಹುದು. ಈ ದೇವಾಲಯದಲ್ಲಿ 7 ತಲದ ಶಿಖರವು ಮೆಟ್ಟಿಲು

ಮೆಟ್ಟಿಲಾಕಾರದಲ್ಲಿದ್ದು, ನಗರ ಶೈಲಿಯಲ್ಲಿವೆ. ಶಿಖರದಲ್ಲಿರುವ ಕೀರ್ತಿ ಮುಖಗಳು ಕೂಡ ಕಂಡುಬರುತ್ತದೆ. ಈ ದೇವಾಲಯ ಗರ್ಭಗುಡಿ ಮೇಲ್ಭಾಗದಲ್ಲಿ ಗೋಪುರವು 7 ತಲದ ಮೆಟ್ಟಿಲು ಮೆಟ್ಟಿಲಾಕಾರದಲ್ಲಿದ್ದು ನಾಗರ ಶೈಲಿಯಲ್ಲಿ ನಾಲ್ಕು ದಿಕ್ಕುಗಳಲ್ಲಿ ಕೀರ್ತಿ ಮುಖಗಳಿವೆ. ಸುಕನಾಸಿ ಮೇಲೆ ಚಾಚಿರುವ ಭಾಗದಲ್ಲಿ ವಿಗ್ರಹವಿದೆ. ಎತ್ತರ ಭಾಗದಲ್ಲಿ ಕೀರ್ತಿ ಮುಖದಲ್ಲಿ ತಾಂಡವೇಶ್ವರ ಕೆತ್ತನೆ ಕಂಡುಬರುತ್ತದೆ. ರಾಮೇಶ್ವರ ದೇವಾಲಯದ ಹೊರಭಾಗದಲ್ಲಿ ಅರೆಗೋಪುರಗಳ ಮೇಲಿನ ಪಟ್ಟಿಕೆಯಲ್ಲಿ ದೇವಾಲಯ ಸುತ್ತಲೂ ಇರುವ ವಿವಿಧ ಭಂಗಿಯ ಕಲಾತ್ಮಕ ಮಿಥುನ ಶಿಲ್ಪಗಳಿದ್ದು ನಮ್ಮ ಪ್ರಾಚೀನತೆ ರಸಿಕತೆಯ ಪ್ರತೀಕವಾಗಿದೆ.

ಹೀಗೆ, ಪ್ರಕೃತಿಯ ಮಡಿಲಿನಲ್ಲಿರುವಂತಹ ಶಿವಮೊಗ್ಗ ಜಿಲ್ಲೆಯಲ್ಲಿ ಇರುವ ಅನೇಕ ಚಾರಿತ್ರಿಕ ತಾಣಗಳು ಮತ್ತು ದೇವಾಲಯಗಳು ಇಡೀ ನಾಡಿನ ಸಾಂಸ್ಕೃತಿಕ ಗತಕಾಲದ ಮತ್ತು ಸಮಕಾಲೀನ ಚರಿತ್ರೆಯನ್ನು ಸಾದರಪಡಿಸುತ್ತವೆ. ಹಾಗೆಯೇ, ಈ ಜಿಲ್ಲೆಯಲ್ಲಿ ತಾಣಗಳು ಹಾಗೂ ದೇವಾಲಯಗಳು ಪ್ರವಾಸಿಗರಿಗೆ ಮುದವನ್ನು ನೀಡವ ಸ್ಥಲಗಳೇ ಆಗಿರುತ್ತವೆ ಎಂದು ಹೇಳಬಹುದು.

**ಅಭ್ಯಸಿಸಿರುವ ಗ್ರಂಥಗಳು**


1. ಕರ್ನಾಟಕ ರಾಜ್ಯ ಗ್ಯಾಸೆಟಿಯರ್
2. ಶಿವಮೊಗ್ಗ ಜಿಲ್ಲಾ ಗ್ಯಾಸೆಟಿಯರ್
3. ಸುಂದರ, ಶಿವಮೊಗ್ಗ ಜಿಲ್ಲಾ ದರ್ಶನ, ಐ.ಬಿ.ಹೆಚ್. ಪ್ರಕಾಶನ ಬೆಂಗಳೂರು, 2000
4. ಜಯದೇವಪ್ಪ ಜೈನಕೇರಿ, 'ಇತಿಹಾಸಪದ' (ಶಿವಮೊಗ್ಗ ಪರಿಸರದ ಐತಿಹಾಸಿಕ ಪ್ರಬಂಧಗಳು), ಶಾಂತಲಾ ಪ್ರಕಾಶನ ಶಿವಮೊಗ್ಗ, 2007.
5. ಪಾಂಡುರಂಗ (ಡಿ.ಆರ್), 'ಕರ್ನಾಟಕ ದೇವಾಯಗಳು ಮತ್ತು ಪ್ರೇಕ್ಷಣೀಯ ಸ್ಥಳಗಳು', ಐ.ಬಿ.ಹೆಚ್. ಪ್ರಕಾಶನ ಬೆಂಗಳೂರು. 2013
6. ಅರಸೆಟ್ಟಿನ ಅಣ್ಣಪ್ಪ, 'ಭದ್ರಾವತಿ ತಾಲೋಕಿನ ದೇವಾಯಗಳ ಸಾಂಸ್ಕೃತಿಕ ಸ'ಂಕಥನ', ಸಿರಿಗನ್ನಡ ಪುಸ್ತಕಮನೆ, 2011
7. ಕೆಸದಿ ವೆಂಕಟೇಶ ಜೋಯಿಸ್, 'ಶಿವಮೊಗ್ಗ ಜಿಲ್ಲೆಯ ಪ್ರೇಕ್ಷಣಿಯ ಸ್ಥಳಗಳು, ಬೆಂಗಳೂರು, 2011